**OS.No.**64/2023
**ಡಿ ಡಬ್ಲ್ಯೂ:1**

**ದಿಃ 17-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈ.ಡಿ ಎಸ್ ವಾದಿ ಪರ ವಕೀಲರಿಂದ**

ನನ್ನ ಮತ್ತು ಪ್ರತಿವಾದಿಯ ವಿವಾಹ ದಿನಾಂಕ 22.08.2019 ರಂದು ಚನ್ನಗಿರಿಯ ಜೆ ಎನ್ ಎಸ್ ಆಫಿಯ ಪ್ಯಾಲೇಸ್ ನಲ್ಲಿ ನಡೆದಿತ್ತು ಎಂದರೆ ಸರಿ. ಆ ಕಾಲಕ್ಕೆ ನಾನು ಕತಾರ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ವಿದೇಶದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನನಗೆ ಒಟ್ಟು 15 ತೊಲ ಬಂಗಾರ ಮತ್ತು 3 ಲಕ್ಷ ಹಣ ನೀಡಿ ವಿವಾಹ ಮಾಡಿದ್ದರು ಎಂದರೆ ಸರಿಯಲ್ಲ. ವಿವಾಹವನ್ನು ವಾದಿಯ ತವರುಮನೆಯವರೆ ನೆರವೇರಿಸಿದ್ದರು. ಸದರಿ ವಿವಾಹವನ್ನು ವಾದಿಯ ಮನೆಯವರು ಸುಮಾರು ರೂ 15 ಲಕ್ಷ ವೆಚ್ಚ ಮಾಡಿ ನೆರವೇರಿಸಿದ್ದರು ಎಂದರೆ ಸರಿಯಲ್ಲ. ವಿವಾಹದ ನಂತರ ನಾನು ವಾದಿಯನ್ನು ವೈವಾಹಿಕ ಜೀವನಕ್ಕಾಗಿ ನಾನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ಧೆ ವಿವಾಹ ಆಗಿ 2 ತಿಂಗಳ ನಂತರ ನಾನು ಕತಾರ್ ದೇಶಕ್ಕೆ ಹೋಗಿದ್ದು ಮತ್ತು ಆ ಕಾಲಕ್ಕೆ ವಾದಿ ನನ್ನ ಮನೆಯಲ್ಲಿಯೇ ಇದ್ದರು ಎಂದರೆ ಸರಿ. ವಿವಾಹ ಆಗಿ ನಾನು ಕತಾರ್ ದೇಶಕ್ಕೆ ಹೋಗುವವರೆಗೆ ಅಂದರೆ ಸುಮಾರು 2 ತಿಂಗಳ ಅವದಿಗೆ ವಾದಿಯೊಂದಿಗೆ ವೈವಾಹಿಕ ಜೀವನ ನಡೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಕತಾರ್ ದೇಶಕ್ಕೆ ಹೋದ ನಂತರ ನನ್ನ ತಾಯಿ ಮತ್ತು ನನ್ನ ಸಹೋದರ ವಾದಿಗೆ ನನಗೆ ವಾದಿ ಸರಿ ಹೋಗುವ ಹೆಂಡತಿಯಲ್ಲ ಮತ್ತು ಸಾಕಷ್ಟು ವರದಕ್ಷಿಣೆ ತಂದಿಲ್ಲ ಎಂಬ ಕಾರಣ ವಾದಿಗೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಸಹೋದರ ನೀಡಿದ್ದ ಕಿರುಕುಳದ ಕಾರಣ ವಾದಿ ಆಸ್ಪತ್ರೆಗೆ ದಾಖಲಾಗಿದ್ದು ಮತ್ತು ಆಸ್ಪತ್ರೆಯಿಂದ ನೇರವಾಗಿ ತನ್ನ ತವರುಮನಗೆ ಬಂದಿದ್ದು ಅಲ್ಲಿಂದ ಇಲ್ಲಿಯವರೆಗೆ ತನ್ನ ತವರುಮನೆಯಲ್ಲಿಯೇ ವಾಸವಿದ್ದಾರೆ ಎಂದರೆ ಸರಿಯಲ್ಲ. ವಾದಿ ಪ್ರಸ್ತುತ ತನ್ನ ತವರುಮನೆಯಲ್ಲಿಯೇ ವಾಸವಿದ್ದಾರೆ. ನಾನು ಕತಾರ್ ದೇಶದಿಂದ ಮರಳಿ ಬಂದ ನಂತರ ವಾದಿ ನನ್ನ ಮನೆಯಲ್ಲಿ ವಾಸವಿಲ್ಲ. ನಾನು ಕತಾರ್ ದೇಶದಿಂದ ಮರಳಿದ ನಂತರ ವಾದಿಗೆ ಮರಳಿ ನನ್ನೊಂದಿಗೆ ನಮ್ಮ ಮನೆಗೆ ಬರಲು ಸಾಕಷ್ಟು ಪ್ರಯತ್ನಿಸಿದ್ದೇನೆ. ನಾನು ಕತಾರ್ ದೇಶದಿಂದ ಮರಳಿ ಬಂದ ನಂತರ ನನ್ನ ತಾಯಿ ಮತ್ತು ಸಹೋದರನ ಮೂಲಕ ವಾದಿ ನನ್ನ ಮನೆಗೆ ಬಾರದಂತೆ ಜೀವ ಬೆದರಿಕೆ ಹಾಕಿಸಿದ್ದು ಮತ್ತು ವಾದಿ ನಮ್ಮ ಮನೆಗೆ ಬಂದಿದ್ದರು ಸಹ ಮನೆಯಿಂದ ಹೊರ ಹಾಕಿಸಿದ್ದೆ ಎಂದರೆ ಸರಿಯಲ್ಲ. ನನ್ನ ತಾಯಿ, ನನ್ನ ಸಹೋದರ ಮತ್ತು ಸಹೋದರನ

ಹೆಂಡತಿ ದಿನಾಂಕ 26.01.2023 ವಾದಿಯ ಮನೆಗೆ ಬಂದು ನನಗೆ ವಿಚ್ಛೇದನೆ ನೀಡುವಂತೆ ವಿಚ್ಛೇದನ ಪತ್ರಕ್ಕೆ ಸಹಿ ಮಾಡುವಂತೆ ವಾದಿಗೆ ಒತ್ತಾಯಿಸಿದ್ದರು ಎಂದರೆ ಸರಿಯಲ್ಲ. ವಾದಿ ಸದರಿ ವಿವಾಹ ವಿಚ್ಛೇದನ ಪತ್ರಕ್ಕೆ ಸಹಿ ಮಾಡಲು ಒಪ್ಪದೇ ಇದ್ದ ಕಾರಣ ನಾನು ನನ್ನ ತಾಯಿ ಮತ್ತು ನನ್ನ ಸಹೋದರ ಎಲ್ಲರೂ ಸೇರಿ ವಾದಿಗೆ ಹಲ್ಲೆ ಮಾಡಿದ್ದು ಆ ಕಾರಣ ವಾದಿ ನಮ್ಮ ವಿರುದ್ದ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಸದರಿ ಪ್ರಕರಣ ಈಗಲೂ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿಯಲ್ಲ. ಚನ್ನಗಿರಿ ನ್ಯಾಯಾಲಯದಲ್ಲಿ ನನ್ನ, ನನ್ನ ಸಹೋದರ ಮತ್ತು ನನ್ನ ತಾಯಿಯ ವಿರುದ್ದ ಈಗಲೂ ಒಂದು ಕ್ರಿಮಿನಲ್ ಪ್ರಕರಣ ನಡೆಯುತ್ತಿದೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ವಿವಾಹ ಆದ ಮೂರನೇ ದಿನಕ್ಕೆ ವಾದಿ ಖಾಯಿಲೆ ಇದೆ ಎಂಬ ವಿಷಯ ನನಗೆ ಗೊತ್ತಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ವಾದಿಗೆ ಖಾಯಿಲೆ ಇದದ ವಿಷಯ ಗೊತ್ತಾದ ನಂತರ ನಾನು ವಾದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆದ. ಹಾಗೆ ಚಿಕಿತ್ಸೆ ಕೊಡಿಸಿದ್ದ ಬಗ್ಗೆ ದಾಖಲೆಗಳು ವಾದಿಯ ಬಳಿ ಇವೆ, ಯಾವ ನಿರ್ದಿಷ್ಟ ದಿನಾಂಕದಂದು ವಾದಿಗೆ ಚಿಕಿತ್ಸೆ ಕೊಡಿಸಿದ್ದೆ ಎಂದು ಹೇಳಲು ಆಗುವುದಿಲ್ಲ. ನಾನು ವಾದಿಯನ್ನು ಆಸ್ಪತ್ರೆಗೆ ತೋರಿಸದೇ ಇದ್ದರೂ ಸಹ ಚಿಕಿತ್ಸೆ ಕೊಡಿಸಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ವಾದಿಯನ್ನು ಮನೆಯಿಂದ ಹೊರ ಹಾಕಬೇಕು ಎಂಬ ಉದ್ದೇಶದಿಂದ ನನ್ನ ತಾಯಿ ಮತ್ತು ಸಹೋದರಿ ಸುಳ್ಳು ಚಿಕಿತ್ಸೆ ಕೊಡಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಸಹೋದರ ಮತ್ತು ಸಹೋದರಿಯರು ವಾದಿಗೆ ಕೊಡಿಸಿದ್ದ ತಪ್ಪು ಚಿಕಿತ್ಸೆಯ ಪರಿಣಾಮ ವಾದಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಪಡೆದು ಆ ಕಾರಣ ರೂ 10-12 ಲಕ್ಷ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯ ಖರ್ಚನ್ನು ವಾದಿ ಮತ್ತು ವಾದಿಯ ಸಂಬಂಧಿಕರು ನೀಡಿದ್ದರು ಎಂದರೆ ಸರಿಯಲ್ಲ. ವಾದಿ ಆಸ್ಪತ್ರೆಯ ಚಿಕಿತ್ಸೆಗಾಗಿ ನಾನು ಸುಮಾರು ರೂ. 5-6 ಲಕ್ಷ ಹಣ ನೀಡಿದ್ದೇನೆ. ನಾನು ಕತಾರ್ ದೇಶದಲ್ಲಿ ಇದ್ದ ಕಾರಣ ನಗದು ರೂಪದಲ್ಲಿ ನನ್ನ ಸಹೋದರನ ಮೂಲಕ ವಾದಿಗೆ ಹಣ ನೀಡಿದ್ದು ಅಲ್ಲದೇ ನನ್ನ ಬ್ಯಾಂಕ್ ಖಾತೆಯ ಮೂಲಕವೂ ಸಹ ಹಣ ನೀಡಿದ್ದೇನೆ. ನಾನು ಬ್ಯಾಂಕ್ ಖಾತೆಯ ಮೂಲಕ ಹಣ ಪಾವತಿಸಿದ್ದ ಕುರಿತು ದಾಖಲೆ ಹಾಜರುಪಡಿಸಿದ್ದೇನೆ.

ಪ್ರಸ್ತುತ ವಾದಿ ಆರೋಗ್ಯವಂತರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ತಂದೆ ತಾಯಿ ಇಲ್ಲ ಮತ್ತು ಅವರ ಸಹೋದರರು ಸಹ ಪ್ರತ್ಯೇಕವಾಗಿ ವಾಸವಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ವಾದಿ ಪ್ರಸ್ತುತ ತನ್ನ ಮನೆಯಲ್ಲಿ ಒಬ್ಬಳೇ ವಾಸವಿದ್ದು ಮತ್ತು ಈಗಲೂ ನನ್ನೊಂದಿಗೆ ಸಾಂಸಾರಿಕ ಜೀವನ ನಡೆಸಲು ಸಿದ್ದಳಿದ್ದಾಳೆ ಎಂದರೆ ಸರಿಯಲ್ಲ. ನಾನು 2 ನೇ ವಿವಾಹ ಆಗಿಲ್ಲ. ಪ್ರಸ್ತುತ ಪ್ರಕರಣ ಪುರಸ್ಕರಿಸದೇ ಇದ್ದರೆ ವಾದಿ ಅನಾಥರಾಗುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ನನ್ನೊಂದಿಗೆ ವೈವಾಹಿಕ ಜೀವನ ನಡೆಸಲು ಬರಲು ಸಿದ್ದಳಿದ್ದು ನಾನು ವಾದಿಗೆ ವಿಚ್ಚೇದನೆ ನೀಡುವ ಉದ್ದೇಶದಿಂದ ವಾದಿಯನ್ನು ಸ್ವೀಕರಿಸುತ್ತಿಲ್ಲ ಎಂದರೆ ಸರಿಯಲ್ಲ. ವಾದಿಯನ್ನು ನನ್ನೊಂದಿಗೆ ಕರೆದುಕೊಂಡು ಹೋಗಬೇಕಾಗುತ್ತದೆ ಎಂಬ ಕಾರಣ ವಾದಿ ನನ್ನ ವಿರುದ್ದ ದಾಖಲಸಿದ ಕ್ರಿಮಿನಲ್ ಪ್ರಕರಣದ ವಿಚಾರಣೆಗಾಗಿ ನಾನು ಪೊಲೀಸ್ ಠಾಣೆಗೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಹಾಜರಾಗಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ವಾದಿಯ ವೈವಾಹಿಕ ವ್ಯಾಜ್ಯದ ಕುರಿತು ದಾವಣಗೆರೆಯ ಸಾಧಿಕ್ ಪೈಲ್ವಾನ್ ರವರ ಮನೆಯಲ್ಲಿ ಮಧ್ಯಸ್ಥಿಕೆ ಸಭೆ ನಡೆದಿದ್ದು ಅಲ್ಲಿಯೂ ಸಹ ನಾನು ಹಾಜರಾಗಿಲ್ಲ ಎಂದರೆ ಸದರಿ ಸಾಧಿಕ್ ಪೈಲ್ವಾನ್ ಸರಿ ಇರದೇ ಕಾರಣ ನಾನು ಹಾಜರಾಗಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ:-**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.